ದಿನಾಂಕ ಃ **23-07-2018** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ ಎಫ ಪಿ ವಕೀಲರಿಂದಃ–

ನಾನು 4 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ವಾದಿಗಳು ನನ್ನ ಸ್ವಂತ ಮಕ್ಕಳು. ನನ್ನ ಹೆಂಡತಿ ಅಂದರೆ ವಾದಿಯರ ತಾಯಿಯ ಹೆಸರು ಸೀತವ್ವ ಎಂದರೆ ಹೌದು. 2 ನೇ ಪ್ರತಿವಾದಿ ನನ್ನ ಅಣ್ಣ ಮತ್ತು 3 ನೇ ಪ್ರತಿವಾದಿ ವಿಠಲ ನನ್ನ ತಮ್ಮ. 3 ನೇ ಪ್ರತಿವಾದಿ ವಿಠಲ ತೀರಿಕೊಂಡು ಸುಮಾರು 30 ವರ್ಷಗಳಾಗಿರುತ್ತವೆ. 3 ನೇ ಪ್ರತಿವಾದಿ ವಿಠಲ ಇವರ ವಾರಸುದಾರರು ಪ್ರತಿವಾದಿ ನಂ.3(ಎ) ರಿಂದ 3(ಡಿ) ಎಂದರೆ ಹೌದು. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಹೌದು. ನಾನು ಸ್ವಂತ ಗಳಿಸಿದ ಆಸ್ತಿಗಳು ಇರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯಲ್ಲಿ ಭಾಗ ಇದೆ ಎಂದರೆ ಹೌದು. ನನ್ನ 1/3 ಹಿಸ್ಸೆಯಲ್ಲಿ ನನ್ನ ಮಗಕ್ಕಳಿಗೂ ಸಮಪಾಲು ಇದೆ ಎಂದರೆ ಹೌದು. ಇಲ್ಲಿಯತನಕ ನನ್ನ ಮತ್ತು ನನ್ನ ಮಕ್ಕಳ ನಡುವೆ ಯಾವುದೇ ವಿಭಾಗ ಆಗಿಲ್ಲ.

ನನ್ನ ಮತ್ತು ನನ್ನ ಹೆಂಡತಿ ನಡುವೆ ಜಗಳ ಇತ್ತು ಅಂತಾ ಮುಖ್ಯವಿಚಾರಣೆ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಹೇಳಿದ್ದು ಅದು ಯಾವ ವಿಚಾರ ಅಂತಾ ಹೇಳಿರುವುದಿಲ್ಲ. ನನ್ನ ಹೆಂಡತಿ ಸೀತವ್ವ ಇವರ ಹೆಸರಿನಲ್ಲಿ ಒಂದು ಮನೆ ತೆಗೆದುಕೊಂಡಿರುತ್ತೇನೆ ಅಂತಾ ಮುಖ್ಯವಿಚಾರಣೆ ಪ್ರಮಾಣ ಪತ್ರದ 4 ನೇ ಪ್ಯಾರಾದಲ್ಲಿ ಹೇಳಿದ ಬಗ್ಗೆ ಆ ಮನೆ ಎಷ್ಟು ವರ್ಷದ ಹಿಂದೆ, ಯಾರಿಂದ ಖರೀದಿ ಮಾಡಿದ್ದೇನೆ ಅಂತಾ ತಿಳಿಸಿದ್ದೀರಾ ಎಂದರೆ ಆ ಬಗ್ಗೆ ವಿಚಾರ ಮಾಡಿಲ್ಲ ಎಂದು ಹೇಳುತ್ತಾರೆ. ವಾದಿಯರು ಮತ್ತು

ನನ್ನ ಹೆಂಡತಿ ಸೌದತ್ತಿಯಲ್ಲಿ ಇದ್ದಾರೆ ಅಂತಾ ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ನನ್ನ ಜೊತೆ ಇರುವುದಿಲ್ಲ ಆದ್ದರಿಂದ ಅವರು ಸೌದತ್ತಿಯಲ್ಲಿ ಇದ್ದಾರೆ ಎಂದು ಹೇಳುತ್ತಾರೆ. ನನ್ನ ಹೆಂಡತಿ ಸೀತವ್ವ ಮತ್ತು ನನ್ನ ಮಕ್ಕಳಾದ ವಾದಿಯರು ಖಾಯಂ ಆಗಿ ನೇಗಿನಹಾಳ ಗ್ರಾಮದಲ್ಲಿ ವಾಸಮಾಡುತ್ತಾರೆ, ಸೌದತ್ತಿಯಲ್ಲಿ ವಾಸ ಮಾಡುವುದಿಲ್ಲ ಸೌದತ್ತಿಗೆ ನನ್ನ ಹೆಂಡತಿಯ ತವರು ಮನೆ ಆಗಿರುವುದರಿಂದ ಅಲ್ಲಿಗೆ ನನ್ನ ಹೆಂಡತಿ ಮತ್ತು ಮಕ್ಕಳು ಹೋಗಿ ಬಂದು ಮಾಡುತ್ತಾರೆ ಖಾಯಂ ವಾಸಿ ಸೌದತ್ತಿಯಲ್ಲಿ ಅಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಹೆಂಡತಿಯ ನಡುವೆ ವಿವಾಹ ವಿಚ್ಛೆದನ ಆಗಿಲ್ಲ. ಒಬ್ಬ ಹೆಂಡತಿ ಇರುವಾಗ ಇನ್ನೊಬ್ಬರನ್ನು ಮದುವೆಯಗುವುದು ಕಾನೂನು ಪ್ರಕಾರ ಅಪರಾಧ ಎಂದರೆ ಇಲ್ಲ. ಪ್ರೇಮಾ ಇವರನ್ನು ಹೆಂಡತಿ ಅಂತಾ ತೋರಿಸಲು ಕೂಪನ ಮತ್ತು ಆಧಾರ ಕಾರ್ಡ ದಾಖಲೆ ಹಾಜರು ಮಾಡಿರುತ್ತೇನೆ. ಈ ಎರಡು ದಾಖಲಾತಿಗಳನ್ನು ಹೊರತುಪಡಿಸಿ ಪ್ರೇಮಾ ನನ್ನ ಹೆಂಡತಿ ಅಂತಾ ತೋರಿಸಲು ಬೇರೆ ದಾಖಲಾತಿ ಇಲ್ಲ ಎಂದರೆ ಇಬ್ಬರದು ಇಲ್ಲಾ ಎಂದು ಹೇಳುತ್ತಾರೆ. ಎಲ್ಲಿ ಮದುವೆಯಾಗಿದೆ, ಯಾರ ಸಮಕ್ಷಮ ಮದುವೆ ಆಗಿದೆ ಮತ್ತು ಯಾವಾಗ ಆಗಿದೆ ಎನ್ನುವ ಬಗ್ಗೆ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ. ಪ್ರೇಮಾ ಎನ್ನುವವರು ಅರ್ಜುನ ಹಾಡಕರ ಇವರ ಹೆಂಡತಿ ಅಂದರೆ ಪ್ರೇಮಾ ನನ್ನ ಹೆಂಡತಿ ಎಂದು ಹೇಳುತ್ತಾರೆ. ಅರ್ಜುನ  ಹಾಡಕರ ಮತ್ತು ಸುರೇಶ ಹಾಡಕರ ಎಂದರೆ ನಾನೇ ಎಂದು ಹೇಳುತ್ತಾರೆ. ನನಗೆ ಅರ್ಜುನ ಅಂತಾ  ನಾನು ಸಣ್ಣವನಿದ್ದಾಗನಿಂದಲೂ ಕರೆಯುತ್ತಾರೆ. ಅರ್ಜುನ  ಹಾಡಕರ ಮತ್ತು ಸುರೇಶ ಹಾಡಕರ  ಅಂತಾ ಎರಡು ಹೆಸರಿನಲ್ಲಿ ನನ್ನನ್ನು ಕರೆಯುತ್ತಾರ ಅಂತಾ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ   ನಾನು ಪ್ರೇಮಾ ಇವಳನ್ನು ಮದುವೆ ಮಾಡಿಕೊಂಡಿರುತ್ತೇನೆ ಅಂತಾ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರೇಮಾ ಇವಳಿಗೆ ಎಲ್ಲಪ್ಪ, ಮಂಜುನಾಥ, ಸಂಜು ಮತ್ತು ಸವಿತಾ ಎನ್ನುವವರು ಮಕ್ಕಳು ಇದ್ದಾರೆ

ಎಂದರೆ ಹೌದು. ಮದುವೆ ಆಗಿ 4 ಮಕ್ಕಳ ತಾಯಿಯಾಗಿರುವ ಪ್ರೇಮಾ ಇವಳ ಜೊತೆ ಅಕ್ರಮ ಸಂಬಂಧವನ್ನು ಇಟ್ಟುಕೊಂಡು ಹಕ್ಕು ಜಮಾಯಿಸುತ್ತಾ ಇದ್ದೇನೆ ಎಂದರೆ ಸುಳ್ಳು. ನಿಡಿ–7 ಹೊಸದಾಗಿ ರೇಷನ ಕಾರ್ಡ ಆಗಿರುತ್ತದೆ. ಈ ಹಿಂದೆ ಇದ್ದ ರೇಶನ ಕಾರ್ಡ ಹಾಜರು ಪಡೆಸಿರುವುದಿಲ್ಲ. ನನ್ನ ಅನುಕೂಲಕ್ಕೆ ತಕ್ಕಂತೆ ನಿಡಿ–5 ರಿಂದ ನಿಡಿ–7 ತಯಾರು ಮಾಡಿ ಹಾಜರು ಪಡೆಸಿರುತ್ತೇನೆ ಎಂದರೆ ಸುಳ್ಳು. ಎಲ್ಲಪ್ಪ ಮತ್ತು ಮಂಜುನಾಥ ಇವರಿಗೆ 2 ವರ್ಷ ವಯಸ್ಸಿನ ಅಂತರ ಇರುತ್ತದೆ. ನಿಡಿ–2 ಸೃಷ್ಟಿ ಮಾಡಿ ತಂದು ಹಾಜರು ಪಡೆಸಿದ ದಾಖಲೆ ಎಂದರೆ ಸುಳ್ಳು. ಎಲ್ಲಪ್ಪ, ಮಂಜುನಾಥ, ಸಂಜು ಮತ್ತು ಸವಿತಾ ಎನ್ನುವವರು ನನ್ನ ಮಕ್ಕಳು ಅಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಏನು ದಾಖಲಾತಿ ಹಾಜರು ಪಡೆಸಿದ್ದೀರಾ ಎಂದರೆ ದಾಖಲಾತಿ ಹಾಜರು ಪಡೆಸಿರುತ್ತೇನೆ ಎಂದು ಹೇಳುತ್ತಾರೆ. ನಿಡಿ–4 ಇದು 2017 ರಲ್ಲಿ ತಿದ್ದುಪಡಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ವಾದಿಯರಿಗೆ ಕಡಿಮೆ ಹಿಸ್ಸೆ ಕೊಡಬೇಕು ಎಂಬ ಕಾರಣದಿಂದ ಎಲ್ಲಪ್ಪ, ಮಂಜುನಾಥ, ಸಂಜು ಮತ್ತು ಸವಿತಾ ಎನ್ನುವವರು ನನ್ನ ಮಕ್ಕಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತನಗೂ ಹಿಸ್ಸೆ ಇದೆ ಅಂತಾ ಹೇಳಿ ಪ್ರತಿವಾದ ಪತ್ರ ಸಲ್ಲಿಸಿರುವ ವಿಷಯ ನನಗೆ ಗೊತ್ತಿಲ್ಲ. ವಾದಿಯರಿಗೆ ಸಮಪಾಲು ಕೊಡಬೇಕಾಗುತ್ತದೆ ಎಂಬ ಕಾರಣದಿಂದ ಪ್ರೇಮಾ ನನ್ನ ಹೆಂಡತಿ ಹಾಗೂ ಎಲ್ಲಪ್ಪ, ಮಂಜುನಾಥ, ಸಂಜು ಮತ್ತು ಸವಿತಾ ಎನ್ನುವವರು ಪ್ರೇಮಾ ಇವಳ ಮಕ್ಕಳಾಗಿದ್ದರೂ ಸಹ ನನ್ನ ಮಕ್ಕಳು ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ